**ಪ್ರ ದ ನ್ಯಾದಂಡಾಧಿಕಾರಿಗಳ ನ್ಯಾಯಾಲಯ, ಕುಶಾಲನಗರ**

**ಸಿ ಸಿ ನಂಃ 1709 /23**

ಸಾಕ್ಷಿಯ ಹೆಸರು: ಮಹೇಶ ಬಿ ಜೆ ಪ್ರಾಸಾ ಃ9

ತಂದೆ / ಗಂಡನ ಹೆಸರು : ಗಣೇಶಚಾರಿ ಚಾಸಾ ಃ 25

ವಯಸ್ಸು : 42

ಉದ್ಯೋಗ : ಪೋಲಿಸ್ ನಿರೀಕ್ಷಕರು

ವಾಸ ಸ್ಥಳ : ಮಳವಳ್ಳಿ

**ಸಾಕ್ಷಿಗೆ ಪ್ರಮಾಣ ವಚನವನ್ನು ಬೋಧಿಸಿ ಪ್ರಮಾಣೀಕರಿಸಿದ ದಿಃ25.11.2025**

**ಮುಖ್ಯ ವಿಚಾರಣೆಃ ಎ ಪಿ ಪಿ ಯವರಿಂದ**

ನಾನು ಸೆಪ್ಟೆಂಬರ 2022 ರಿಂದ ಅಕ್ಟೋಬರ 2023 ರವರೆಗೆ ಕುಶಾಲನಗರದ ವೃತ್ತ ನಿರೀಕ್ಷಕನಾಗಿ ಕರ್ತವ್ಯ ನಿರ್ವಹಿಸಿರುತ್ತೇನೆ.

ದಿಃ 16.06.2023 ರಂದು ಚಾಸಾ 24 ರವರಿಂದ ಕಡತವನ್ನು ಸ್ವೀಕರಿಸಿ ತನಿಖೆಯನ್ನು ಮುಂದುವರೆಸಿರುತ್ತೇನೆ. ಅದೆ ದಿನಾಂಕದಂದು ಚಾಸಾ 24 ರವರಿಗೆ ಜ್ಞಾಪನಾವನ್ನು ನೀಡಿ ಸದರಿ ಪ್ರಕರಣದ ಮೃತೆ ಭಾವನಾವಳ ಶವ ಪಂಚನಾಮೆ ಮತ್ತು ಶವಪಂಚನಾಮೆಯ ನಂತರ ವೈದ್ಯರಿಂದ ಶವ ಪರಿಕ್ಷೆ ಮತ್ತು ಅದಕ್ಕೆ ಸಂಬಂದಿಸಿದ ದಾಖಲೆಗಳನ್ನು ಹಾಜರುಪಡಿಸುವಂತೆ ತಿಳಿಸಿರುತ್ತೇನೆ. ನಂತರ ಚಾಸಾ 24 ರವರು ಶವ ಪಂಚನಾಮೆ ವರದಿಯನ್ನು ತಂದು ಹಾಜರುಪಡಿಸಿದ್ದು ಅದರೊಂದಿಗೆ ಶವ ಪಂಚನಾಮೆಯಲ್ಲಿ ತೆಗೆಸಿದ ಫೋಟೋ ಮತ್ತು ಫೋಟೋವನ್ನು ಒಳಗೊಂಡಿರುವ ಡಿ ವಿ ಡಿ ಮತ್ತು ಫೋಟೋ ತೆಗೆದಂತಹ ಚಾಸಾ 19 ರವರು ನೀಡಿದಂತಹ 65 ಬಿ ಪ್ರಮಾಣ ಪತ್ರವನ್ನು ಹಾಜರುಪಸಿಡಿಸಿದ್ದು ಅದನ್ನು ಕಡತಕ್ಕೆ ಅಳವಡಿಸಿಕೊಂಡಿರುತ್ತೇನೆ. ದಿಃ 16.07.2023 ರಂದು ಚಾಸಾ 18 ರವರು ಹೇಳಿಕೆಯನ್ನು

ಪಡೆದುಕೊಂಡಿರುತ್ತೇನೆ. ದಿಃ 23.06.2023 ರಂದು ಚಾಸಾ 3 ರವರಿಗೆ ನೋಟಿಸನ್ನು ಜಾರಿ ಮಾಡಿ ಅಪಘಾತ ಸ್ಥಳವನ್ನು ತೋರಿಸುವಂತೆ ಮತ್ತು ಅಪಘಾತ ಪಡಿಸಿದ ವಾಹನಗಳನ್ನು ಗುರುತಿಸಿ ಕೊಡುವಂತೆ ಸದರಿ ನೋಟಿಸಿನಲ್ಲಿ ತಿಳಿಸಿರುತ್ತೇನೆ. ಅದೆ ದಿನಾಂಕದಂದು ಚಾಸಾ 11 ಮತ್ತು 12 ರವರಿಗೆ ನೋಟಿಸನ್ನು ಜಾರಿ ಮಾಡಿ ಚಾಸಾ 3 ರವರು ತೋರಿಸುವಂತಹ ಅಪಘಾತ ಸ್ಥಳದ ಮಹಜರ ಜರುಗಿಸುವ ಸಮಯದಲ್ಲಿ ಪಂಚರಾಗುವಂತೆ ಸದರಿಯವರಿಗೆ ತಿಳಿಸಿರುತ್ತೇನೆ. ನಂತರ ಕುಶಾಲನಗರ ಸಂಚಾರಿ ಪೋಲಿಸ್ ಠಾಣೆ ವ್ಯಾಪ್ತಿಗೆ ಬರುವ ಬೈಚನಹಳ್ಳಿ ಗ್ರಾಮದ ರಾಯಲ್ ಎನ್ ಫೀಲ್ಡ್ ಬೈಕ್ ಶೋರೂಂ ನ ಮುಂದಿನ ರಾಷ್ಟ್ರೀಯ ಹೆದ್ದಾರಿ 275 ರಸ್ತೆಯಲ್ಲಿ ಚಾಸಾ 3 ರವರು ತೋರಿಸಿದ ಸ್ಥಳದಲ್ಲಿ ಚಾಸಾ 11 ಮತ್ತು 12 ರವರ ಸಮಕ್ಷಮ ಸಂಜೆ 4.00 ಸಮಯದಿಂದ 4.45 ಸಮಯದವರೆಗೆ ಸ್ಥಳದಲ್ಲಿ ಸ್ಥಳ ಮಹಜರನ್ನು ಜರುಸಿರುತ್ತೇನೆ ಮತ್ತು ಕಚ್ಚಾ ನಕ್ಷೆಯನ್ನು ತಯಾರಿಸಿರುತ್ತೇನೆ . ನಂತರ ಚಾಸಾ 3 ಮತ್ತು 11ಮತ್ತು 12 ರವರ ಸಹಿಯನ್ನು ಪಂಚನಾಮೆಗೆ ಪಡೆದಿರುತ್ತೇನೆ. ನಂತರ ಸ್ಥಳ ಮಹಜರ ಸಮಯದಲ್ಲಿ ಛಾಯಚಿತ್ರವನ್ನು ತೆಗೆದಿರುತ್ತೇನೆ.

ನಂತರ ಚಾಸಾ 24 ರವರು ಅಪಘಾತ ಸ್ಥಳದಿಂದ ಕೃತ್ಯದಲ್ಲಿ ಭಾಗಿಯಾದ ವಾಹನಗಳನ್ನು ತೆಗೆದುಕೊಂಡು ಹೋಗಿ ಸಂಚಾರಿ ಪಿ ಎಸ್ ಠಾಣೆಯ ಆವಾರಣದಲ್ಲಿ ನಿಲ್ಲಿಸಿದ್ದು ಸದರಿಯವರು ಹಾಜರುಪಡಿಸಿದಂತಹ ಬೈಕ್ ನಂ ಕೆ ಎ 45 ಇ ಬಿ 6593 ರಾಯಲ್ ಎನ್ ಫೀಲ್ಡ್ ಕಂಪನಿಗೆ ಸೇರಿದ ಕಪ್ಪು ಬಣ್ಣದ ಬುಲೆಟ್ ಬೈಕನ್ನು ಮತ್ತು ಹೋಂಡಾ ಕಂಪನಿಗೆ ಸೇರಿದ ಬ್ಲ್ಯೂ ಬಣ್ಣದ ಆಕ್ಟೀವ ಸ್ಕೂಟಿಯಾದ ಸಂಖ್ಯೆ ಕೆ ಎ 12 ಆರ್ 5488 ವಾಹನಗಳನ್ನು ಚಾಸಾ 11 ಮತ್ತು 12 ರವರ ಸಮಕ್ಷಮ ಚಾಸಾ 3 ರವರು ಗುರುತಿಸಿದಂತೆ ಅಮಾನತ್ತು ಮಹಜರ್ ಕ್ರಮದ ಮೂಲಕ ವಶಕ್ಕೆ ಪಡೆದಿರುತ್ತೇನೆ. ಸದರಿ ಮಹಜರನ್ನು 5.00-5.45 ರವರೆಗೆ ಜರುಗಿರಿಸಿರುತ್ತೇನೆ ಮತ್ತು ಚಾಸಾ 20 ರವರಿಂದ ಛಾಯಚಿತ್ರವನ್ನು ತೆಗೆದುಕೊಂಡಿರುತ್ತೇವೆ. ಸದರಿ ವಾಹನಗಳನ್ನು ಠಾಣಾ ಸ್ವತ್ತಿನ ಪಟ್ಟಿ ಸಂಖ್ಯೆ 47/23 ರಂತೆ ನಮೂದಿಸಿ ನ್ಯಾಯಾಲಯಕ್ಕೆ

ಸಲ್ಲಿಸಿರುತ್ತೇನೆ. ಅದೇ ದಿನಾಂಕದಂದು ಚಾಸಾ 11, 12 ಮತ್ತು 3 ರವರ ಹೇಳಿಕೆಯನ್ನು ದಾಖಲಿಸಿಕೊಂಡಿರುತ್ತೇನೆ. ಮತ್ತು ಚಾಸಾ 20 ರವರಿಂದ 65 ಬಿ ಅಡಿಯಲ್ಲಿ ದೃಡೀಕರಣ ಪತ್ರವನ್ನು ಪಡೆದುಕೊಂಡಿರುತ್ತೇನೆ. ದಿಃ 30.06.2023 ರಂದು ಚಾಸಾ 15 ರವರಿಗೆ ಸದರಿ ಪ್ರಕರಣದಲ್ಲಿ ವಶಪಡಿಸಿಕೊಂಡ ವಾಹನಗಳನ್ನು ತಾಂತ್ರಿಕ ಪರಿಶೀಲನೆ ಮಾಡಿ ವರದಿಯನ್ನು ನೀಡುವಂತೆ ಪತ್ರ ವ್ಯವಹಾರವನ್ನು ಮಾಡಿರುತ್ತೇನೆ. ದಿಃ 01.07.2023 ರಂದು ಚಾಸಾ 14 ರವರಿಗೆ ಕೆ ಎ 45 ಇ ಬಿ 6493 ವಾಹನದ ಬಿ ಎಕ್ಸ್ಟ್ರಾಕ್ಟ ನೀಡುವಂತೆ ಮನವಿ ಪತ್ರವನ್ನು ಸಲ್ಲಿಸಿರುತ್ತೇನೆ. ಅದೆ ದಿನಾಂಕದಂದು ಚಾಸಾ 14 ರವರು ಬಿ ಎಕ್ಸ್ಟ್ರಾಕ್ಟನ್ನು ನೀಡಿದ್ದು ಕಡತಕ್ಕೆ ಅಳವಡಿಸಿಕೊಂಡಿರುತ್ತೇನೆ.

ದಿಃ 05.07.2023 ರಂದು ಚಾಸಾ 27 ರವರು ಮೃತ ಭಾವನಾಳ ವಿಸೇರವನ್ನು ಕುಶಾಲನಗರ ಸರಕಾರಿ ಆಸ್ಪತ್ರೆಯಿಂದ ತಂದು ಹಾಜರುಪಡಿಸಿದ್ದು ಸ್ವತ್ತಿನ ಪಟ್ಟಿ ಸಂಖ್ಯೆ 56/23 ರಂತೆ ನಮೂದಿಸಿ ನ್ಯಾಯಾಲಯಕ್ಕೆ ಸಲ್ಲಿಸಿಕೊಂಡಿರುತ್ತೇನೆ. ದಿಃ 07.07.2023 ರಂದು ಸದರಿ ಮೃತಳ ವಿಸೇರವನ್ನು ಚಾಸಾ 21 ರವರ ಮೂಲಕ ಆರ್ ಎಫ್ ಎಲ್ ಗೆ ಕಳುಹಿಸಿಕೊಟ್ಟಿದ್ದು ಸದರಿಯವರು ತನ್ನ ಸ್ವೀಕೃತಿಯನ್ನು ತಂದು ಕೊಟ್ಟಿದ್ದು ಅದನ್ನು ಕಡತಕ್ಕೆ ಅಳವಡಿಸಿಕೊಂಡಿರುತ್ತೇನೆ. ನಂತರ ಸದರಿಯವರ ಹೇಳಿಕೆಯನ್ನು ದಾಖಲಸಿಕೊಂಡಿರುತ್ತೇನೆ. ದಿಃ 07.07.2023 ರಂದು ಕೆ ಎ 12 ಆರ್ 5488 ಹೊಂಡಾ ಆಕ್ಟೀವಾ ಸ್ಕೂಟಿಯನ್ನು ಬಿಡುಗಡೆಗೊಳಿಸುವಂತೆ ನ್ಯಾಯಾಲಯವು ಆದೇಶಿಸಿದ್ದು ಅದರಂತೆ ಸದರಿ ವಾಹನವನ್ನು ಮಹಜರ್ ಮೂಲಕ ಚಾಸಾ 13 ರವರಿಗೆ ಬಿಡುಗಡೆಗೊಳಿಸಿ ವರದಿಯನ್ನು ಸಲ್ಲಿಸಿರುತ್ತೇನೆ. ದಿಃ 08.07.2023 ರಂದು ಚಾಸಾ 13 ರವರಿಗೆ ಸ್ಕೂಟಿ ನಂ 12/5488 ರ ದಾಖಲಾತಿಗಳನ್ನು ಹಾಜರುಪಡಿಸಿರುವಂತೆ ಮತ್ತು ಕೃತ್ಯ ನಡೆದ ಸಂದರ್ಭದಲ್ಲಿ ಸ್ಕೂಟಿಯನ್ನು ಯಾರು ಹೋಡಿಸುತ್ತಿದ್ದರು ಎಂಬುದರ ಮಾಹಿತಿ ನೀಡುವಂತೆ ಕಲಂ 133 ರ ಐ ಎಂ ವಿ ಅಡಿಯಲ್ಲಿ

ನೋಟಿಸನ್ನು ಜಾರಿ ಮಾಡಿರುತ್ತೇನೆ. ನಂತರ ಅದೇ ದಿನಾಂಕದಂದು ಸದರಿಯವರು ಉತ್ತರ ನೀಡಿದ್ದು ಕೃತ್ಯ ನಡೆದ ಸಂದರ್ಭದಲ್ಲಿ ಚಾಸಾ 2 ರವರು ಸ್ಕೂಟಿಯನ್ನು ಹೋಡಾಡಿಸುತ್ತಿರುವುದಾಗಿ ಚಾಲನೆ ಮಾಡುತ್ತಿದ್ದವರ ಡಿ ಎಲ್ , ಸ್ಕೂಟಿಯ ಇನ್ಸುರೆನ್ಸ , ಆರ್ ಸಿ ಪ್ರತಿಗಳನ್ನು ಹಾಜರುಪಡಿಸಿದ್ದು ಕಡತಕ್ಕೆ ಅಳವಡಿಸಿಕೊಂಡಿರುತ್ತೇನೆ.

ದಿಃ 12.07.2023 ರಂದು ಚಾಸಾ 15 ರವರು ಐ ಎಂ ವಿ ಕಾಯ್ದಿ ಅಡಿಯಲ್ಲಿ ವಾಹನಗಳನ್ನು ಪರಿಶೀಲನೆ ಮಾಡಿ ವರದಿಯನ್ನು ನೀಡಿದ್ದು ಕಡತಕ್ಕೆ ಅಳವಡಿಸಿಕೊಂಡಿರುತ್ತೇನೆ. ದಿಃ 20.07.2023 ರಂದು ಚಾಸಾ 17 ರವರಿಂದ ಚಾಸಾ 2 ರವರ ಗಾಯದ ಪ್ರಮಾಣ ಪತ್ರವನ್ನು ಪತ್ರ ವ್ಯವಹಾರದ ಮೂಲಕ ಪಡೆದುಕೊಂಡಿರುತ್ತೇನೆ. ದಿಃ 25.07.2023 ರಂದು 1 ನೇ ಆರೋಪಿಯಾದ ವರುಣ್ ರವರಿಗೆ 41(a) ಸಿ ಆರ್ ಪಿ ಸಿ ಅಡಿಯಲ್ಲಿ ನೋಟಿಸನ್ನು ಜಾರಿ ಮಾಡಿದ್ದು ಅದರಂತೆ ಆರೋಪಿತನು ಕಚೇರಿಗೆ ಹಾಜಾರಾಗಿದ್ದು ಸದರಿಯವರ ಸ್ವಇಚ್ಛಾ ಹೇಳಿಕೆಯನ್ನು ಪಡೆದುಕೊಂಡಿರುತ್ತೇನೆ ಮತ್ತು ಇನ್ನೊಂದು ನೋಟಿಸನ್ನು ಜಾರಿ ಮಾಡಿರುತ್ತೇನೆ. ನಂತರ 2 ನೇ ಆರೋಪಿಯಾದ ಪುನೀತ್ ರವರಿಗೆ 41 (a) (1) ರ ಸಿ ಆರ್ ಸಿ ಪಿ ಅಡಿಯಲ್ಲಿ ನೋಟಿಸನ್ನು ಜಾರಿ ಮಾಡಿದ್ದು ಅದರಂತೆ 2 ನೇ ಆರೋಪಿಯವರು ಕಚೇರಿಗೆ ಹಾಜರಾಗಿದ್ದು ಸದರಿಯವರಿಗೆ ಮೋಟಾರ್ ವಾಹನ ಕಾಯ್ದೆ 133 ಅಡಿಯಂತೆ ನೋಟಿಸನ್ನು ಜಾರಿ ಮಾಡಿದ್ದು ನಂತರ ಸದರಿಯವರು ಅದಕ್ಕೆ ಉತ್ತರವನ್ನು ನೀಡಿದ್ದು ಸದರಿ ಕೃತ್ಯ ನಡೆದ ಸಮಯದಲ್ಲಿ 1 ನೇ ಆರೋಪಿಯು ವಾಹನವನ್ನು ಚಾಲನೆ ಮಾಡುತ್ತಿದ್ದು ಎಂಬುದಾಗಿ ತಿಳಿಸಿರುತ್ತಾರೆ ಮತ್ತು ವಾಹನಕ್ಕೆ ಸಂಬಂದಿಸಿದ ದಾಖಲಾತಿಯನ್ನು ಹಾಜರಪಡಿಸಿರುತ್ತಾರೆ. ದಿಃ 26.07.2023 ರಂದು ಚಾಸಾ 17 ರವರಿಗೆ ಪತ್ರ ವ್ಯವಹಾರವನ್ನು ಮಾಡಿ ಚಾಸಾ 1 ರವರ ಗಾಯದ ಪ್ರಮಾಣ ಪತ್ರವನ್ನು ಪಡೆದುಕೊಂಡಿರುತ್ತೇನೆ. ದಿಃ 28.07.2023 ರಂದು ಬೈಕ್ ನಂ ಕೆ ಎ 45 ಇ ಬಿ 6493 ರ ಬಿಡುಗಡೆಗೆ ನ್ಯಾಯಾಲಯವು ಆದೇಶ ನೀಡಿದ್ದು ಅದರಂತೆ ಪಂಚರ

ಸಮಕ್ಷಮ ಮಹಜರ್ ಮೂಲಕ ವಾಹನವನ್ನು 2 ನೇ ಆರೋಪಿಗೆ ಬಿಡುಗಡೆ ಮಾಡಿರುತ್ತೇನೆ ಮತ್ತು ಆ ಸಮಯದಲ್ಲಿ ಛಾಯಚಿತ್ರವನ್ನು ತೆಗೆದಿರುತ್ತೇನೆ. ದಿಃ 30.07.2023 ರಂದು ಚಾಸಾ 2 ರವರ ಹೇಳಿಕೆಯನ್ನು ದಾಖಲಿಸಿರುತ್ತೇನೆ. ದಿಃ 18.08.2023 ರಂದು ನಾನು ವರ್ಗಾವಣೆಗೊಂಡಿದ್ದರಿಂದ ಕಡತವನ್ನು ಚಾಸಾ 26 ರವರಿಗೆ ಹಸ್ತಾಂತರಿಸಿರುತ್ತೇನೆ.

ಸಾಕ್ಷಿಗೆ ಸ್ಥಳ ಪಂಚನಾಮೆಯನ್ನು ತೋರಿಸಲಾಗಿ ಸಾಕ್ಷಿಯು ಅದರಲ್ಲಿರುವ ತನ್ನ ಸಹಿಯನ್ನು ನೋಡಿ ಗುರುತಿಸಿದ ಮೇರೆಗೆ ಸದರಿ ಸ್ಥಳ ಪಂಚನಾಮೆಯನ್ನು ಈಗಾಗಲೆ ನಿಪಿ 2 ಎಂದು ಗುರುತಿಸಿದ್ದು , ಸಾಕ್ಷಿಯ ಸಹಿಯನ್ನು ನಿಪಿ 2ಡಿ ಎಂದು ಗುರುತಿಸಲಾಯಿತು. ಸಾಕ್ಷಿಗೆ ಅಮಾನತು ಪಂಚನಾಮೆಯನ್ನು ತೋರಿಸಲಾಗಿ ಸಾಕ್ಷಿಯು ಅದರಲ್ಲಿರುವ ತನ್ನ ಸಹಿಯನ್ನು ನೋಡಿ ಗುರುತಿಸಿದ ಮೇರೆಗೆ ಸದರಿ ಅಮಾನತು ಪಂಚನಾಮೆಯನ್ನು ಈಗಾಗಲೆ ನಿಪಿ 3 ಎಂದು ಗುರುತಿಸಿದ್ದು , ಸಾಕ್ಷಿಯ ಸಹಿಯನ್ನು ನಿಪಿ 3ಇ ಎಂದು ಗುರುತಿಸಲಾಯಿತು. ಸಾಕ್ಷಿಗೆ ಶವ ತನಿಖ ವರದಿಯನ್ನು ತೋರಿಸಲಾಗಿ ಸಾಕ್ಷಿ ಅದರಲ್ಲಿರುವ ತನ್ನ ಸಹಿಯನ್ನು ನೋಡಿ ಗುರುತಿಸಿದ ಮೇರೆಗೆ ಸದರಿ ಶವ ತನಿಖ ವರದಿಯನ್ನು ಈಗಾಗಲೆ ನಿಪಿ 5 ಎಂದು ಗುರುತಿಸಿದ್ದು , ಸಾಕ್ಷಿಯ ಸಹಿಯನ್ನು ನಿಪಿ 5ಬಿ ಎಂದು ಗುರುತಿಸಲಾಯಿತು. ಸಾಕ್ಷಿಗೆ ಕುಶಾಲನಗರ ಸರಕಾರಿ ಆಸ್ಪತ್ರೆ ವೈದ್ಯಾದಿಕಾರಿಗಳಿಗೆ ನೀಡಿದ ಮನವಿ ಪತ್ರ ಮತ್ತು ಅವರಿಂದ ಪಡೆದ ಗಾಯದ ಪ್ರಮಾಣ ಪತ್ರವನ್ನು ತೋರಿಸಲಾಗಿ ಸಾಕ್ಷಿಯು ಅವುಗಳಲ್ಲಿರುವ ತನ್ನ ಸಹಿಗಳನ್ನು ನೋಡಿ ಗುರುತಿಸಿದ ಮೇರೆಗೆ ಸದರಿ ಮನವಿಯನ್ನು ಮತ್ತು ಪ್ರಮಾಣ ಪತ್ರವನ್ನು ನಿಪಿ 8, 9 ಎಂದು ಗುರುತಿಸಿದ್ದು , ಸಾಕ್ಷಿಯ ಸಹಿಗಳನ್ನು ನಿಪಿ 8ಎ , 9ಎ ಎಂದು ಗುರುತಿಸಲಾಯಿತು.ಸಾಕ್ಷಿಗೆ ಕುಶಾಲನಗರ ಸರಕಾರಿ ಆಸ್ಪತ್ರೆ ವೈದ್ಯಾದಿಕಾರಿಗಳಿಗೆ ನೀಡಿದ ಮನವಿ ಪತ್ರ ಮತ್ತು ಅವರಿಂದ ಪಡೆದ ಗಾಯದ ಪ್ರಮಾಣ ಪತ್ರವನ್ನು ತೋರಿಸಲಾಗಿ ಸಾಕ್ಷಿಯು ಅವುಗಳಲ್ಲಿರುವ ತನ್ನ ಸಹಿಗಳನ್ನು ನೋಡಿ ಗುರುತಿಸಿದ ಮೇರೆಗೆ ಸದರಿ ಮನವಿ ಪತ್ರವನ್ನು ಮತ್ತು ಪ್ರಮಾಣ ಪತ್ರವನ್ನು ನಿಪಿ 10, 11 ಎಂದು ಗುರುತಿಸಿದ್ದು , ಸಾಕ್ಷಿಯ ಸಹಿಗಳನ್ನು ನಿಪಿ10ಎ ,11ಎ ಎಂದು

ಗುರುತಿಸಲಾಯಿತು. ಸಾಕ್ಷಿಗೆ ಕುಶಾಲನಗರ ಪ್ರಾದಿಕಾರ ಸಾರಿಗೆ ಅಧಿಕಾರಿಯವರಿಗೆ ನೀಡಿದ ಮನವಿ ಪತ್ರ ಮತ್ತು ಅವರಿಂದ ಪಡೆದ ಬಿ ಎಕ್ಸ್ಟ್ರಾಕ್ಟ ದಾಖಲಾತಿಯನ್ನು ತೋರಿಸಲಾಗಿ ಸಾಕ್ಷಿಯು ಅವುಗಳಲ್ಲಿರುವ ತನ್ನ ಸಹಿಗಳನ್ನು ನೋಡಿ ಗುರುತಿಸಿದ ಮೇರೆಗೆ ಸದರಿ ಮನವಿ ಪತ್ರವನ್ನು ಮತ್ತು ಬಿ ಎಕ್ಸ್ಟ್ರಾಕ್ಟ ನ್ನು ನಿಪಿ 12, 13 ಎಂದು ಗುರುತಿಸಿದ್ದು , ಸಾಕ್ಷಿಯ ಸಹಿಗಳನ್ನು ನಿಪಿ 12ಎ , 13ಎ ಎಂದು ಗುರುತಿಸಲಾಯಿತು.ಸಾಕ್ಷಿಗೆ ಕುಶಾಲನಗರ ಪ್ರಾದಿಕಾರ ಸಾರಿಗೆ ಅಧಿಕಾರಿಯವರಿಗೆ ನೀಡಿದ ಮನವಿ ಪತ್ರ ಮತ್ತು ಅವರಿಂದ ಪಡೆದ ಐ ಎಂ ವಿ ವರದಿಯನ್ನು ತೋರಿಸಲಾಗಿ ಸಾಕ್ಷಿಯು ಅವುಗಳಲ್ಲಿರುವ ತನ್ನ ಸಹಿಗಳನ್ನು ನೋಡಿ ಗುರುತಿಸಿದ ಮೇರೆಗೆ ಸದರಿ ಮನವಿ ಪತ್ರವನ್ನು ಮತ್ತು ಐ ಎಂ ವಿ ವರದಿಯನ್ನು ನಿಪಿ 14, 15 ಎಂದು ಗುರುತಿಸಿದ್ದು , ಸಾಕ್ಷಿಯ ಸಹಿಗಳನ್ನು ನಿಪಿ 14ಎ, 15ಎ ಎಂದು ಗುರುತಿಸಲಾಯಿತು. ಸಾಕ್ಷಿಗೆ ಕಲಂ 133 ರ ಅಡಿಯಲ್ಲಿ 2 ನೇ ಆರೋಪಿಗೆ ನೀಡಿದ ನೋಟಿಸು ಮತ್ತು ಪಡೆದ ಉತ್ತರವನ್ನು ತೋರಿಸಲಾಗಿ ಸಾಕ್ಷಿಯು ಅವುಗಳಲ್ಲಿರುವ ತನ್ನ ಸಹಿಗಳನ್ನು ನೋಡಿ ಗುರುತಿಸಿದ ಮೇರೆಗೆ ಸದರಿ ನೋಟಿಸು ಮತ್ತು ಪಡೆದ ಉತ್ತರವನ್ನು ನಿಪಿ 16, 17 ಎಂದು ಗುರುತಿಸಿದ್ದು , ಸಾಕ್ಷಿಯ ಸಹಿಗಳನ್ನು ನಿಪಿ 16ಎ , 17ಎ ಎಂದು ಗುರುತಿಸಲಾಯಿತು.ಸಾಕ್ಷಿಗೆ ಕಲಂ 133 ರ ಅಡಿಯಲ್ಲಿ ಚಾಸಾ 13 ರವರಿಗೆ ನೀಡಿದ ನೋಟಿಸು ಮತ್ತು ಪಡೆದ ಉತ್ತರವನ್ನು ತೋರಿಸಲಾಗಿ ಸಾಕ್ಷಿಯು ಅವುಗಳಲ್ಲಿರುವ ತನ್ನ ಸಹಿಗಳನ್ನು ನೋಡಿ ಗುರುತಿಸಿದ ಮೇರೆಗೆ ಸದರಿ ನೋಟಿಸು ಮತ್ತು ಪಡೆದ ಉತ್ತರವನ್ನು ನಿಪಿ 18, 19 ಎಂದು ಗುರುತಿಸಿದ್ದು , ಸಾಕ್ಷಿಯ ಸಹಿಗಳನ್ನು ನಿಪಿ 18ಎ, 19ಎ ಎಂದು ಗುರುತಿಸಲಾಯಿತು.ಸಾಕ್ಷಿಗೆ ಜ್ಞಾಪನಾವನ್ನು ತೋರಿಸಲಾಗಿ ಸಾಕ್ಷಿಯು ಅದರಲ್ಲಿರುವ ತನ್ನ ಸಹಿಗಳನ್ನು ನೋಡಿ ಗುರುತಿಸಿದ ಮೇರೆಗೆ ಸದರಿ ಜ್ಞಾಪನಾವನ್ನು ನಿಪಿ 20 ಎಂದು ಗುರುತಿಸಿದ್ದು , ಸಾಕ್ಷಿಯ ಸಹಿಯನ್ನು ನಿಪಿ 20ಎ ಎಂದು ಗುರುತಿಸಲಾಯಿತು. ಸಾಕ್ಷಿಗೆ ವಿಶೇಷವಾದ ವರದಿಯನ್ನು ತೋರಿಸಲಾಗಿ ಸಾಕ್ಷಿಯು ಅದರಲ್ಲಿರುವ ತನ್ನ ಸಹಿಯನ್ನು ನೋಡಿ ಗುರುತಿಸಿದ ಮೇರೆಗೆ ಸದರಿ ವರದಿಯನ್ನು ನಿಪಿ 21 ಎಂದು ಗುರುತಿಸಿದ್ದು , ಸಾಕ್ಷಿಯ ಸಹಿಯನ್ನು ನಿಪಿ 21ಎ ಎಂದು ಗುರುತಿಸಲಾಯಿತು. ಸಾಕ್ಷಿಗೆ 65 ಬಿ ಅಡಿಯಲ್ಲಿ ಪಡೆದ ಸರ್ಟಿಫಿಕೇಟ ಮತ್ತು 4 ಫೋಟೋ

ಮತ್ತು 1 ಸಿಡಿಯನ್ನು ತೋರಿಸಲಾಗಿ ಸಾಕ್ಷಿಯು ಸದರಿ ಸರ್ಟಿಫಿಕೇಟನಲ್ಲಿ ತನ್ನ ಸಹಿ ಮತ್ತು ಫೋಟೋಗಳನ್ನು ಮತ್ತು ಸಿಡಿಯನ್ನು ನೋಡಿ ಗುರುತಿಸಿದ ಮೇರೆಗೆ ಸದರಿ ಸರ್ಟಿಫಿಕೇಟನ್ನು ನಿಪಿ 22 ಎಂದು , ಸಾಕ್ಷಿಯ ಸಹಿಯನ್ನು ನಿಪಿ 22 ಎ ಎಂದು , ಫೋಟೋಗಳು ಮತ್ತು ಸಿಡಿಯನ್ನು ನಿಪಿ 23 ರಿಂದ 27 ಎಂದು ಗುರುತಿಸಲಾಯಿತು.

**ಪಾಟೀ ಸವಾಲು ಃ 2 ನೇ ಆರೋಪಿ ಪರ ಶ್ರೀ ಹೆಚ್ ಸಿ ಎಂ ಕೆ ವಕೀಲರಿಂದ**

ದಿಃ 16.06.2023 ರಿಂದ 23.06.2023 ರವರೆಗೆ ಸ್ಥಳ ಪಂಚನಾಮೆ ಮಾಡಿರುವುದಕ್ಕೆ ಕಾರಣ ಎಂದರೆ ಸಾಕ್ಷಿಯು ನಾನು ಅನ್ಯ ಕರ್ತವ್ಯದಲ್ಲಿದ್ದ ಕಾರಣ ಮತ್ತು ಪ್ರತ್ಯಕ್ಷದರ್ಶಿಗಳು ಸರಿಯಾಗಿ ಸಿಗುತ್ತಿಲ್ಲದ ಕಾರಣ ಆಗಿರುವುದಿಲ್ಲ ಎಂದು ನುಡಿದರು. ನಾನು ನಿಪಿ 2 ರಂತೆ ಯಾವುದೆ ಸ್ಥಳ ಪಂಚನಾಮೆ ಮಾಡದೆ ನಿಪಿ 2 ನ್ನು ಠಾಣೆಯಲ್ಲಿ ಕುಳಿತು ತಯಾರಿಸಿರುತ್ತೇನೆ ಎಂದರೆ ಸರಿಯಲ್ಲ. ಕೃತ್ಯವೆಸಗಿದ ಬೈಕ್ ಯಾವ ಕಡೆಯಿಂದ ಬಂತು ಎಂದು ತಿಳಿದುಕೊಂಡಿರುತ್ತೇನೆ. ಸದರಿ ಬುಲೆಟ್ ವಾಹನ ಸುಂಟಿಕೊಪ್ಪ ರಸ್ತೆಯಿಂದ ಕುಶಾಲನಗರ ಕಡೆಗೆ ಬಂದಿರುತ್ತದೆ. ಸುಂಟಿಕೊಪ್ಪದಿಂದ ಕುಶಾಲನಗರ ಕಡೆಗೆ ಆರೋಪಿ ಬೈಕ್ ಓಡಿಸಿಕೊಂಡು ಬಂದರು ಎಂದು ತೋರಿಸಲು ಸಿಸಿಟಿವಿ ಫೋಟೇಜನ್ನು ಪಡೆದುಕೊಂಡಿದ್ದೀರಾ ಎಂದರೆ ಸಾಕ್ಷಿಯು ಯಾವುದೆ ಸಿಸಿಟಿವಿ ಫೋಟೇಜ್ ದೊರೆಕಿರುವುದಿಲ್ಲ ಎಂದರು ನುಡಿದರು. ಸ್ಥಳದಲ್ಲಿ ಸದರಿ ಬುಲೆಟ್ ಬೈಕನಿಂದ ಅಪಘಾತವಾಗಿರುತ್ತದೆ ಎಂದು ತೋರಿಸಲು ಯಾವುದಾದರು ನಿಶಾನೆಗಳನ್ನು ವಶಕ್ಕೆ ಪಡೆದುಕೊಂಡಿರಾ ಎಂದರೆ ಸಾಕ್ಷಿಯು ಮಹಜರ ಜರುಗಿಸುವ ಸಮಯದಲ್ಲಿ ಯಾವುದೆ ವಸ್ತುಗಳು ಸಿಕ್ಕಿರುವುದಿಲ್ಲ ಆದರೆ ಕೃತ್ಯ ನಡೆದ ಸಮಯಕ್ಕೆ ಪೋಲಿಸರು ಸ್ಥಳಕ್ಕೆ ಆಗಮಿಸಿ ಕೃತ್ಯನಡೆದ ಸ್ಥಳದಿಂದ ಅಪಘಾತಕ್ಕಿಡಾಂತಹ ಬುಲೆಟ್ ಮತ್ತು ಸ್ಕೂಟಿಯನ್ನು ಠಾಣೆಗೆ ತೆಗೆದುಕೊಂಡು ಹೋಗಿರುತ್ತಾರೆ ಎಂದು ನುಡಿದರು. ಆ ರೀತಿಯಾಗಿ ಪೋಲಿಸರು ವಾಹನವನ್ನು ತೆಗೆದುಕೊಂಡು ಹೋದರು ಎಂದು ತೋರಿಸಲು ಯಾವುದೆ ಮಹಜರ ಮಾಡಿರುವುದಿಲ್ಲ.

ಸದರಿ ವಾಹನಗಳನ್ನು ಅಪಘಾತ ಸ್ಥಳದಿಂದ ತೆಗೆದುಕೊಂಡು ಹೋಗಿರುತ್ತಾರೆ ಎಂದು ತೋರಿಸಲು ನಮ್ಮ ಬಳಿ ಯಾವುದೆ ದಾಖಲಾತಿ ಇರುವುದಿಲ್ಲ ಎಂದರೆ ಸರಿ . ನನ್ನ ವಿಚಾರಣೆ ಕಾಲದಲ್ಲಿ ಮೃತರು ಹೆಲ್ಮೆಟ್ ಧರಿಸಿದ್ದರೋ ಇಲ್ಲಮೋ ಎಂದು ವಿಚಾರಣೆ ಮಾಡಿರುವುದಿಲ್ಲ. ಚಾಸಾ 2 ರವರು

ಮೃತರನ್ನು ಹೆಲ್ಮೆಟ್ ಇಲ್ಲದೆ ಕೂರಿಸಿಕೊಂಡು ಹೋಗಿ ಅವರೇ ಸ್ವಯಂಕೃತ ಅಪಘಾತ ಉಂಟು ಮಾಡಿಕೊಂಡಿರುವ ಕಾರಣ ಭಾವನಾರವರು ಮೃತರಾಗಿರುತ್ತಾರೆ ಎಂದರೆ ಸರಿಯಲ್ಲ. ಈ ಪ್ರಕರಣಕ್ಕೂ ಹಾಗೂ ಆರೋಪಿಗೂ ಸಂಬಂಧ ಇರುವುದಿಲ್ಲ ಎಂದರೆ ಸರಿಯಲ್ಲ. ಈ ಪ್ರರಕಣದಲ್ಲಿ ಒಳಗೊಂಡಿರುವ 2 ನೇ ಆರೋಪಿಯ ವಾಹನಕ್ಕೂ ಮತ್ತು ಅಪಘಾತಕ್ಕೂ ಯಾವುದೆ ಸಂಬಂದ ಇರುವುದಿಲ್ಲ ಎಂದರೆ ಸರಿಯಲ್ಲ. ನಿಪಿ 3 ರಂತೆ ನಾನು ಯಾವುದೆ ವಾಹನಗಳನ್ನು ಅಮಾನತುಪಡಿಸಿಕೊಂಡಿರುವುದಿಲ್ಲ ಎಂದರೆ ಸರಿಯಲ್ಲ. ನಿಪಿ 4 ರಿಂದ 27 ರವರೆಗೆ ದಾಖಲಾತಿಗಳನ್ನು ಈ ಪ್ರಕರಣಕೊಸ್ಕರ ಸೃಷಿಸಿಕೊಂಡಿರುತ್ತೇನೆ ಎಂದರೆ ಸರಿಯಲ್ಲ. ಸದರಿ ಅಪಘಾತಕ್ಕೂ ಮತ್ತು ಆರೋಪಿಗೂ ಯಾವುದೆ ಸಂಬಂಧ ಇರುವುದಿಲ್ಲ ಎಂದರೆ ಸರಿಯಲ್ಲ. ಸದರಿ ಅಪಘಾತವು ಚಾಸಾ 2 ರವರ ನಿರ್ಲಕ್ಷ್ಯತನದಿಂದ ಆಗಿದ್ದು ಅವರನ್ನು ರಕ್ಷಣೆ ಮಾಡಲು ಸುಳ್ಳು ಸಾಕ್ಷ್ಯ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ.

1 ನೇ ಆರೋಪಿ ಪರ ವಕೀಲರು 2 ನೇ ಆರೋಪಿ ಪರ ವಕೀಲರ ಪಾಟೀ ಸವಾಲನ್ನು ಅಳವಡಿಸಿಕೊಳ್ಳುತ್ತೇನೆ ಎಂದು ನುಡಿದರು.

ಮರು ವಿಚಾರಣೆ ಇಲ್ಲ.

(ನನ್ನ ಉಕ್ತಲೇಖನದಂತೆ ತೆರೆದ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಲಾಗಿದೆ.)

ಓದಿ ಹೇಳಿ ಕೇಳಿ ಸರಿ ಇದೆ.

ಸಹಿ/-

ಪ್ರ ದ ನ್ಯಾದಂ, ಕುಶಾಲನಗರ.